## ತಾಳಾ ತಂಬೂರಿ ಟ್ರೇನಿನೊಳಗೆ

ಪ್ರತಿನಿತ್ಯ ಒಂದು ನಿರ್ದಿಷ್ಟ ಸಮಯದಲ್ಲಿ ಮತ್ತು ನಿರ್ದಿಷ್ಟ ಬೋಗಿಯಲ್ಲಿ ಪ್ರಯಾಣಿಸುವವರು ಭಾಷೆ ಪ್ರದೇಶ ಜಾತಿ ಧರ್ಮಗಳನ್ನು ಮೀರಿ ಪರಿಚಯದ ಸಹಯಾತ್ರಿಗಳಾಗುತ್ತಾರೆ. ತಮ್ಮದೇ ಗುಂಪು ಮಾಡಿಕೊಂಡು ಮಾತುಕತೆ, ತಮಾಷೆ, ಚರ್ಚೆ, ನಗುವಿನಲ್ಲಿ ದಾರಿ ಸವೆಸುತ್ತಾರೆ. ಕೆಲವು ಸಂಗೀತ ಪ್ರೇಮಿಗಳು ಬೇರೆಯದೇ ಗುಂಪು ಮಾಡಿಕೊಂಡು ಮಹಮ್ಮದ್ ರಫಿ, ಕಿಶೋರ್‌ಕುಮಾರರ ಹಳೆಯ ಹಾಡುಗಳನ್ನು ಹಾಡುತ್ತಾರೆ. ಇನ್ನು ಕೆಲವು ಬೋಗಿಗಳಲ್ಲಿ ಭಜನಾ ಮಂಡಳಿಗಳು ತಾಳ ತಂಬೂರಿಯೊಂದಿಗೆ ದಾರಿಯುದ್ದಕ್ಕೂ ವಿಠೋಬನನ್ನೂ ರುಕಮಾಮಾಯಿಯನ್ನೂ ಜೊತೆಗೇ ಕರೆದೊಯ್ಯುತ್ತಾರೆ. ಭಜನೆಯು ತಾರಕ ಸ್ವರಕ್ಕೆ ತಲುಪಿದಾಗ ಅದು ನಗರ ಬದುಕಿನ ಜಂಜಾಟಗಳಿಂದ ಮುಕ್ತಿ ಕೊಡು ಪ್ರಭುವೇ ಎಂಬ ಆರ್ತಧ್ವನಿಯಂತೆ ಕೇಳಿಸುತ್ತದೆ.

## ಈ ಗ್ಯಾಸ್‌ಗೆ ಸಬ್ಸಿಡಿಯಿಲ್ಲ

ತಿನ್ನು ಉಣ್ಣುವುದರಲ್ಲಿ ಹೆಚ್ಚು ಕಮ್ಮಿಯಾಗಿ ಒಂದಿಷ್ಟು ಗ್ಯಾಸು ಹೊರ ಹಾಕಿದರೆ ಜೀವಕ್ಕೆ ಸಮಾಧಾನ ಆದೀತೆಂದು ಆಶಿಸಿ ಟ್ರೇನಿನಲ್ಲಿ ಪ್ರಯಾಣಿಸುವಾಗ ನೀವು ಚೂರು ಲೀಕು ಮಾಡಿದರೂ ಸಾಕು... ಬಿತ್ತು ನಿಮಗೆ ಗಾಲಿ! 'ಬೆಂಛೋದ್, ಸಾಲಾ, ಗೋಬರ್ ಖಾಕೇ ಆಯಾ ಹೈ ಕ್ಯಾ?' ಇತ್ಯಾದಿ. ಈ ಗಚ್ಚಾಗಚ್ಚಿಯಲ್ಲಿ ಗ್ಯಾಸ್ ಬಿಟ್ಟವರು ಯಾರೆಂದು ಪತ್ತೆಯಾಗೋದಿಲ್ಲ ಎಂದು ನೀವು ಭಾವಿಸಿದರೆ ನಿಮ್ಮಂಥ ದಡ್ಡರು ಯಾರಿಲ್ಲ. ಇಲ್ಲಿ ಲೀಕ್‌ನ ಮೂಲವನ್ನು ನಿಖರವಾಗಿ ಕಂಡುಹಿಡಿಯಲಾಗುತ್ತದೆ ಮತ್ತು ಬಿಟ್ಟ ಗ್ಯಾಸಿನ ಗಾಢತೆ ಮತ್ತು ಗಂಧಕ್ಕೆ ಅನುಪಾತದಲ್ಲಿಯೇ ಗಾಲಿಗಳೂ ಗೂಸಾಗಳೂ ಇರುತ್ತವೆ. ಹುಶಾರ್!

## ಹುಡುಗೀರು ಸಾರ್ ಹುಡುಗೀರು!

ಪ್ರತಿ ಲೋಕಲ್ ಟ್ರೇನಿನಲ್ಲೂ ಲೇಡೀಸ್ ಕಂಪಾರ್ಟ್‌ಮೆಂಟುಗಳಿರುತ್ತವೆ. ಅದೂ ಅಲ್ಲದೇ ಮುಂಜಾನೆ ಮತ್ತು ಸಂಜೆ ಆಫೀಸಿನ ಸಮಯದಲ್ಲಿ ಮಹಿಳೆಯರಿಗೆ ಅನುಕೂಲವಾಗಲು 'ಲೇಡೀಸ್ ಸ್ಪೆಷಲ್' ಟ್ರೇನುಗಳನ್ನು ಬಿಡಲಾಗುತ್ತದೆ. ಲೇಡೀಸ್ ಸ್ಪೆಷಲ್‌ನಲ್ಲಿ ಎಲ್ಲ ಬೋಗಿಗಳೂ ಮಹಿಳೆಯರಿಗೇ. ಆ ಟ್ರೇನನ್ನು ನೋಡುವುದೇ ಚಂದ. ಅಷ್ಟೇನು ರಶ್ ಇಲ್ಲದ ಆ ಲೋಕಲ್ಲಿನಲ್ಲಿ ಹಾಯಾಗಿ ಕೂತು ಅಥವಾ ಗಾಳಿಗೆ ನಿಂತು ಪ್ರಯಾಣಿಸುವ ಹುಡುಗಿಯರನ್ನು ನೋಡುವಾಗ ಎಂಥಾ ಗಂಡಸರಲ್ಲೂ ಒಂದು ಕ್ಷಣ 'ಹೆಣ್ಣಾಗಿ ಹುಟ್ಟಬಾರದಿತ್ತೆ' ಎಂಬ ಭಾವನೆ ಸುಳಿದು ಹೋಗುತ್ತದೆ! ಮಾತು ಕತೆ, ತಿಂಡಿ ತಿನಿಸು, ಕನ್ನಡಿ, ಲಿಪ್‌ಸ್ಟಿಕ್, ಮೇಕಪ್, ಆಗಾಗ ಪಾರ್ಟಿ... ಲೇಡೀಸ್ ಕಂಪಾರ್ಟ್‌ಮೆಂಟ್‌ನೊಳಗೆ ಬೇರೆಯದೇ ಲೋಕ. ಕನ್ನಡಿ ಅವಿಭಾಜ್ಯ ಅಂಗ. ಈಗ ಮೊಬೈಲ್ ಸ್ಕ್ರೀನ್ ಆ ಸ್ಥಾನ ಪಡೆದಿದೆ. ನಾಲ್ಕಿಂಚು ಉದ್ದದ ಬಾಟಲಿಯ ನೀರನ್ನು ಹನ್ನೆರಡು ಸ್ಟೇಶನ್ನುಗಳವರೆಗೂ ಕುಡಿಯುವ ವಯ್ಯಾರ. ಬಾಗಿಲ ಬಳಿ ನಿಂತ ಕನ್ಯಾಮಣಿಗಳ ಕೇಶರಾಶಿಯು ಗಾಳಿಯಲ್ಲಿ ಗರಿಗೆದುರುವಾಗ ಕಾವ್ಯದ ಸಾಲುಗಳಂತೆ ಕಚಗುಳಿಯಿಡುತ್ತವೆ. ಅವರು ಧರಿಸಿದ ಬಣ್ಣಬಣ್ಣದ ದುಪ್ಪಟ್ಟಾಗಳೂ ಗಾಳಿಯಲ್ಲಿ ಬಿಂಕದಿಂದ ನಲಿಯುವುದನ್ನು ನೋಡಿಯೇ ಕಾಣಬೇಕು! ಲೇಡೀಸ್ ಸ್ಪೆಷಲ್ ಕೊನೆಯ ಸ್ಟೇಶನ್ ಸಿಎಸ್‌ಟಿ ಅಥವಾ ಚರ್ಚ್‌ಗೇಟನ್ನು ತಲುಪಿದಾಗ ಪ್ಲಾಟ್‌ಫಾರ್ಮ್ ಮೇಲೆ ಆ ತುದಿಯಿಂದ ಈ ತುದಿವರೆಗೂ ಆತ್ಮವಿಶ್ವಾಸದಿಂದ